# ಪ್ರಾರ್ಥನೆ

## ಗೋವಿಂದಾಷ್ಟಕಮ್ - ೨



**ಗೋಪಾಲಂ ಭೂಲೀಲಾವಿಗ್ರಹಗೋಪಾಲಂ ಕುಲಗೋಪಾಲಮ್**
**ಗೋಪೀಖೇಲನಗೋವರ್ಧನಧೃತಿಲೀಲಾಲಾಲಿತಗೋಪಾಲಮ್ ।**
**ಗೋಭಿರ್ನಿಗದಿತಗೋವಿಂದಸ್ಫುಟನಾಮಾನಂ ಬಹುನಾಮಾನಮ್**
**ಗೋಪೀಗೋಚರದೂರಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೪ ॥**

ಗೋವುಗಳನ್ನು ರಕ್ಷಿಸುವ, ಭೂಮಿಯಲ್ಲಿ ಲೀಲೆಗಳನ್ನು ಮಾಡಲು ಗೋಪಾಲ ರೂಪವನ್ನು ಧರಿಸಿರುವ, ಗೊಲ್ಲರ ಕುಲಕ್ಕೆ ಸೇರಿದವನಾದ, ಗೋಪಿಯರೊಡನೆ ಲೀಲಾ ವಿನೋದಗಳನ್ನು ಮಾಡಿದ, ಗೋವರ್ಧನಪರ್ವತವನ್ನು ಲೀಲಾಜಾಲವಾಗಿ ಎತ್ತಿ ಸಕಲ ಗೋಪರನ್ನೂ ರಕ್ಷಿಸಿದ, ಸ್ಪಷ್ಟವಾದ ಮಾತುಗಳಿಂದ 'ಗೋವಿಂದ' ಎಂಬ ಪದವಿಯಲ್ಲಿ ಅಭಿಷಿಕ್ತನಾದ, ಅನೇಕ ನಾಮಗಳಿಂದ ಸ್ತುತಿಸಲ್ಪಡುವ, ಗೋಪರಿಗೆ ಹಾಗೂ ಇಂದ್ರಿಯ ಗಳಿಗೆ ಗೋಚರನಲ್ಲದ ಪರಮಾನಂದರೂಪಿ ಗೋವಿಂದನನ್ನು ನಮಸ್ಕರಿಸಿರಿ.

**ಗೋಪೀಮಂಡಲಗೋಷ್ಠೀಭೇದಂ ಭೇದಾವಸ್ಥಮಭೇದಾಭಮ್**
**ಶಶ್ವದ್ಗೋಖುರನಿರ್ಧೂತೋದ್ಧತ ಧೂಲೀಧೂಸರಸೌಭಾಗ್ಯಮ್ ।**
**ಶ್ರದ್ಧಾಭಕ್ತಿಗೃಹೀತಾನಂದಮಚಿಂತ್ಯಂ ಚಿಂತಿತಸದ್ಭಾವಮ್**
**ಚಿಂತಾಮಣಿ ಮಹಿಮಾನಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೫ ॥**

ಗೋಪೀಜನರ ಸಮೂಹದಲ್ಲಿ ಪ್ರವೇಶಿಸಿ, ಅವರೆಲ್ಲರಿಗಿಂತ ವಿಭಿನ್ನನಾಗಿದ್ದರೂ, ಎಲ್ಲರೊಳಗೆ ಒಂದಾಗಿದ್ದೂ ಅಭಿನ್ನನೇ ಆಗಿರುವ, ಆಗಾಗ ಗೋವುಗಳ ಗೊರಸಿನ ಹೊಡೆತದಿಂದ ಮೇಲೆದ್ದ ಧೂಳಿನಿಂದ ಮೈ ಮಲಿನಗೊಳ್ಳುವಂತಹ ಸೌಭಾಗ್ಯವನ್ನು ಪಡೆದಿರುವ, ಶ್ರದ್ಧೆ, ಭಕ್ತಿಗಳನ್ನು ಹೊಂದಿದವರಿಗೆ ಆನಂದಸ್ವರೂಪಿಯಾದ, ಚಿಂತನೆಗಳಿಗೆ ನಿಲುಕದವನಾದರೂ ಚಿಂತಿಸಲ್ಪಡುವ ಸದ್ಭಾವಗಳುಳ್ಳ, 'ಚಿಂತಾಮಣಿ'ಯಂತಹ ಮಹಿಮೆ ಯುಳ್ಳ, ಪರಮಾನಂದಸ್ವರೂಪಿ ಗೋವಿಂದನನ್ನು ನಮಸ್ಕರಿಸಿರಿ.

**ಸ್ನಾನವ್ಯಾಕುಲಯೋಷಿದ್ವಸ್ತ್ರಮುಪಾದಾಯಾಗಮುಪಾರೂಢಮ್**
**ವ್ಯಾದಿತ್ಸಂತೀರಥ ದಿಗ್ವಸ್ತ್ರಾದ್ಯುಪ ದಾತುಮುಪಾದರ್ಷಂತಮ್ ।**
**ನಿರ್ಧೂತದ್ವಯಶೋಕವಿಮೋಹಂ ಬುದ್ಧಂ ಬುದ್ಧೇರಂತಸ್ಥಮ್**
**ಸತ್ತಾಮಾತ್ರಶರೀರಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೬ ॥**

ಸ್ನಾನದಲ್ಲಿ ಮಗ್ನರಾಗಿದ್ದ ಗೋಪಸ್ತ್ರೀಯರ ವಸ್ತ್ರಗಳನ್ನೆತ್ತಿಕೊಂಡು ಮರವೇರಿದ, ತಮ್ಮ ವಸ್ತ್ರವನ್ನು ಬೇಡಿದ ಅವರಿಗೆ ನೀರಿನಿಂದ ಮೇಲೆದ್ದು ತನ್ನ ಬಳಿಗೆ ಬರಲು ಆದೇಶಿಸಿದ, ಶೋಕ-ಮೋಹಗಳೆರಡನ್ನೂ ತೊಡೆದು ಹಾಕುವ, ಜ್ಞಾನಸ್ವರೂಪಿಯಾದ ಬುದ್ಧಿಯ ಒಳಗಿನ ಅಸ್ತಿತ್ವವೇ ('ಸತ್') ಶರೀರವಾಗಿರುವ ಪರಮಾನಂದರೂಪಿ ಗೋವಿಂದನನ್ನು ನಮಸ್ಕರಿಸಿರಿ.

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ

ಶ್ರೇಷ್ಠ ಜ್ಞಾನವೂ ಶ್ರೇಷ್ಠ ಧರ್ಮವೂ ಆಗಿರುವ ಆಧ್ಯಾತ್ಮಿಕತೆ ಯನ್ನು ನಾವು ಕೊಂಡುಕೊಳ್ಳಲಾರೆವು; ಗ್ರಂಥಗಳಿಂದಲೂ ಗ್ರಹಿಸ ಲಾರೆವು. ಪ್ರಪಂಚದ ಮೂಲೆ ಮೂಲೆಗಳನ್ನು ಹುಡುಕಬಹುದು, ಹಿಮಾಲಯ, ಆಲ್ಪ್ಸ್, ಕಾಕಸಸ್ ಪರ್ವತ ಶ್ರೇಣಿಗಳನ್ನೆಲ್ಲಾ ಶೋಧಿಸ ಬಹುದು... ನಿಮ್ಮ ಹೃದಯವು ಸ್ವೀಕರಿಸುವುದಕ್ಕೆ ಅಣಿ ಯಾಗಿದ್ದು ಗುರು ಬರುವವರೆಗೆ ಅದು ನಿಮಗೆ ದೊರಕಲಾರದು. ದೇವರಿಂದ ಕಳಿಸಲ್ಪಟ್ಟ ಗುರು ಬಂದಾಗ ಮಗುವಿನಂತೆ ಸರಳ ಶ್ರದ್ಧೆಯಿಂದ ಅವನನ್ನು ಸೇವಿಸಿ.

— ಸ್ವಾಮಿ ವಿವೇಕಾನಂದ

ಏಳಿ, ಎಚ್ಚರಗೊಳ್ಳಿ, ಶ್ರೇಷ್ಠರಾದ ಗುರುಗಳ ಬಳಿಗೆ ಹೋಗಿ; ಜ್ಞಾನವನ್ನು ಹೊಂದಿರಿ. — ಕಠೋಪನಿಷತ್

ಪ್ರಪಂಚವನ್ನು ಪರೀಕ್ಷಿಸಿ ತಿಳಿದು, ಅದರಲ್ಲಿ ವೈರಾಗ್ಯವನ್ನು ಹೊಂದಿ, ಜ್ಞಾನವನ್ನು ಪಡೆಯಲು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುಗಳನ್ನು ವಿನಯಪೂರ್ವಕವಾಗಿ ಸಮಿತ್ತುಗಳೊಂದಿಗೆ ಸಮೀಪಿಸಿ ಅವರಲ್ಲಿ ಶರಣಾಗಿರಿ. — ಮುಂಡಕೋಪನಿಷತ್

ದೀರ್ಘದಂಡ ಪ್ರಣಾಮದಿಂದಲೂ, ಪ್ರಶ್ನಿಸುವುದರಿಂದಲೂ, ಗುರುಸೇವೆಯಿಂದಲೂ ಬ್ರಹ್ಮಜ್ಞಾನವನ್ನು ಪಡೆಯಬೇಕು.

— ಭಗವದ್ಗೀತೆ